ಳಿಂದ ಬಂದಿರತಕ್ಕಂಥ ವರದಿಯನ್ನು ನೋಡಿದರೆ ಜಾಸ್ತಿಯೆಂದು ಕೊಟ್ಟಿದ್ದಾರೆ. ಆ ರೀತಿ ಅವರು ಕೊಡದೆ ಆರು ಆಣಿ ಬೆಳೆಗಿಂತ ಕಡಿಮೆಯಾಗಿದ್ದರೆ ಆಟೋಮೆಟಿಕ್ ಆಗಿ ಪರಿವರ್ತನೆಯಾಗುತ್ತದೆ. ಆದ್ದರಿಂದ ತಾವು ಆ ತಾಲ್ಲೂಕಿನಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಅನುಕೂಲವನ್ನು ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಹಳ್ಳಿಗಳ ವಿಚಾರವನ್ನು ಹೇಳಿದ್ದಾರೆ ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಮಾಡಬೇಕಾಗುತ್ತದೆ. ಆದರೆ ರೆವಿನ್ಯೂ ಅಧಿಕಾರಿಗಳು ಏನು ಅಣಿವಾರಿಯನ್ನು ಜಾಸ್ತಿ ಬರೆದಿದ್ದರೆ ಅದನ್ನು ಕಡಿಮೆ ಬರೆಯೆಂದು ನನಗೆ ಹೇಳಲಕ್ಕೆ ಬರುವುದಿಲ್ಲ. ಅದು ನನ್ನ ಇಲಾಖೆಯಲ್ಲ.

PAPERS LAID ON THE TABLE

SMT. E. F. VAZ.—Madam I beg to lay Notification No. GSR 97 dated 24th March, 1977 The Karnataka Excise (Distillery and Warehouse) (Amendment) Rules, 1977 under Section 71 (4) of the Karnataka Excise Act, 1965.

I also lay on behalf of the Finance Minister, Notification No. GSR 39 dated 6th January 1977. The Karnataka Agricultural Income Tax (Second Amendment) Rules 1976, under Section 63 of the Karnataka Agricultural Income Tax Act, 1957.

MADAM SPEAKER.—Both the notification are land on the table.

Matter under Rule 312

Sandalwood affairs of the Rajajinagar Police Station

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ತಿಂಗಳು 19ನೇ ತಾರೀಖು ಬೆಂಗಳೂರಿನಲ್ಲಿ ರಿಕ್ಷಾ ಡ್ರೈವರ್ ಅಬ್ದುರ್ ರವೂಫ್ ಎಂಬುವನು ತನ್ನ ಆಟೋರಿಕ್ಷಾದಲ್ಲಿ ಪ್ಯಾಸೆಂಜರ್ ಒಬ್ಬರು ಒಂದು ಮೂಟೆ ಗಂಧದ ತುಂಡನ್ನು ತೆಗೆದುಕೊಂಡು ಹೋಗುವಾಗ ಅನುಮಾನ ಬಂದು ಆ ರಿಕ್ಷಾ ಓನರ್ ಅನ್ನು ಕರೆದುಕೊಂಡು ಇಬ್ಬರೂ ರಾಜಾಜಿನಗರದ ಪೋಲೀಸ್ ಠಾಣೆಗೆ ಹೋಗಿ ಫಿರ್ಯಾದ್ ಕೊಟ್ಟಿದ್ದಾರೆ. ಗಂಟು ಮೂಟೆ ಸಮೇತವಾಗಿ ಈ ಜನರು ಫಿರ್ಯಾದ್ ಕೊಟ್ಟರೆ ಅವರನ್ನೇ ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದು ಹೀನಾಮಾನವಾಗಿ ಬೈದಿರುವುದು ಪತ್ರಿಕೆಯಲ್ಲಿಯೂ ವರದಿಯಾಗಿದೆ. ಒಬ್ಬ ಸಬ್‌ಇನ್ಸ್‌ಪೆಕ್ಟರ್ ಈ ರೀತಿ ನಡೆದುಕೊಳ್ಳುವುದಾದರೆ ಅತನು ವಿಚಾರಣೆಯನ್ನು ಯಾವ ರೀತಿ ಮಾಡುತ್ತಾನೆ ? ಇದು ಬಹಳ ವಿಷಾದ ಸಂಗತಿ ಜೊತೆಗೆ ಕೇಸಿಗೆ ಸಂಬಂಧಪಡದ ವಿಷಯದಲ್ಲಿ ಪ್ರಧಾನಮಂತ್ರಿಗಳ ಹೆಸರಗಳನ್ನು ಉಪಯೋಗಿಸಿ ಅವಮಾನಕರವಾದ ಮಟ್ಟಿಗೆ ಮಾತನಾಡಲು ಹೋಗುವುದನ್ನು ಕೇಳಿದರೆ ನಮ್ಮ ಮನಸ್ಸಿಗೆ ಬಹಳ ಖೇದವಾಗುತ್ತದೆ. ದಯಮಾಡಿ ಈ ವಿಚಾರದಲ್ಲಿ ತಾವು ಅತನನ್ನು ತರಾಟೆಗೆ ತೆಗೆದುಕೊಳ್ಳದೆ ಹೋದರೆ ಸರಿಹೋಗುವುದಿಲ್ಲ.

†ಶ್ರೀ ಡಿ ದೇವರಾಜ ಅರಸ್ (ಮುಖ್ಯಮಂತ್ರಿಗಳು).—ನಮ್ಮ ಎನ್‌ಕ್ವೈರಿ ಪ್ರಕಾರ ಅವನನ್ನು ಹೊಡೆದ ಹೆಡ್‌ಕಾನ್ಸ್‌ಟೇಬರ್ ನನ್ನ ಸಸ್‌ಪೆಂಡ್ ಮಾಡಿ ಪರಾರಿಯಾದ ವ್ಯಕ್ತಿಯ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಇವರನ್ನು ಜುಡಿಷಿಯಲ್ ಕಸ್ಟಡಿಗೆ ಹಾಕಿಬಿಟ್ಟಿದ್ದಾರೆ. ಇದರ ಎನ್‌ಕ್ವೈರಿಯನ್ನು ಮಲ್ಲೇಶ್ವರದ ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್ ಅವರು ವಿಚಾರಣೆ ನಡೆಸುತ್ತಾರೆ.